appointed, the Stenographers were getting Rs. 15 per day and Typists and Second Division Clerks were getting Rs. 10 per day. This was revised to Rs. 20 and Rs. 15 after one year. Since then, inspite of their repeated representations to departmental officers and Hon'ble Chief Minister, nobody has cared to listen to their request. The daily rated workers in P.W.D. and Forest Departments are getting more and in the computer section of Commercial Tax Department also, the daily rated workers are getting a consolidated salary of Rs. 600–700 per month. In this connection, I urge the Government to consider their request and absorb them wherever possible in the Commercial Tax Department.

SRI M. RAGHUPATHI.— It is a fact that 536 candidates are working on daily wages in the cadres of Second Division Assistants, Typists and Stenographers on daily wage of Rs. 15 per day, in the case of Second Division Assistants and Typists and Rs. 20 per day in the case of Stenographers in the Commercial Taxes Department.

The practice and procedure in respect of appointments of persons on daily wage basis against the sanctioned posts, now being followed is that such appointments may be made for a period of four months only. And if for any reasons, they are required to be continued, the person earlier appointed should not be continued instead other persons may be appointed. Hence the question of their absorption does not arise.

೧೭) ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಬರಗಾಲ ಪರಿಸ್ಥಿತಿಯಿದ್ದು ಪಂಪ್‌ಸೆಟ್‌ಗಳಿಗೆ ವಿದ್ಯುತ್ ಕಡಿತ ಮಾಡದಂತೆ ಮನವಿ

ಶ್ರೀ ಪೂರ್ಣಚಂತ್ರಪ್ಪ.— ಚಿತ್ರದುರ್ಗ ಜಿಲ್ಲೆಯ ನನ್ನ ಕ್ಷೇತ್ರವಾದ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳು ಬರಗಾಲದ ಪ್ರದೇಶಗಳಾಗಿದ್ದು ಈ ಪ್ರದೇಶಗಳಲ್ಲಿ ಯಾವ ನೀರಾವರಿ (ಕೆರೆ, ಚಾನಲ್) ಸೌಲಭ್ಯವಿರುವುದಿಲ್ಲ. ಬಾಗಾಯ್ತು ಅಂದರೆ ಆಲ್ಪ ಸ್ವಲ್ಪ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಅಳವಡಿಸಿಕೊಂಡು ನೀರಾವರಿ ಫಸಲು ಬೆಳೆಯುತ್ತಾರೆ. ಈಗ ಹಾಲಿ ಇಟ್ಟಿರತಕ್ಕ ಫಸಲುಗಳು ತೆಗೆದು ಬಿಟ್ಟು ಕಾಳು ಕಟ್ಟುವ ಸ್ಥಿತಿಯಲ್ಲಿರುತ್ತವೆ. ಈ ಪರಿಸ್ಥಿತಿಯಲ್ಲಿ ವಿದ್ಯುಚ್ಛಕ್ತಿ ಇಲಾಖೆಯವರು ಪವರ್ ಕಡಿತ ಮಾಡಿದಲ್ಲಿ ರೈತರಿಗೆ ತುಂಬಾ ಹಾನಿಯಾಗುತ್ತದೆ. ಪ್ರಯುಕ್ತ ಪೈರುಗಳು ರೈತನ ಕೈಸೇರುವ ತನಕ ಅಂದರೆ, ಸುಮಾರು ಎರಡು ತಿಂಗಳಾದರೂ ಪಂಪ್‌ಸೆಟ್ಟುಗಳ ಆಶ್ರಯವನ್ನೇ ನಂಬಿರತಕ್ಕ ಚಳ್ಳಕೆರೆ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿ ವಿದ್ಯುಚ್ಛಕ್ತಿ ಕಡಿತವನ್ನು ತಡೆಹಿಡಿಯುವಂತೆ ಸಂಬಂಧಪಟ್ಟ ಚಿತ್ರದುರ್ಗ ಜಿಲ್ಲಾ ವಿದ್ಯುಚ್ಛಕ್ತಿ ಇಲಾಖೆಯ ಎಕ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಆದೇಶ ನೀಡಲು ವಿದ್ಯುಚ್ಛಕ್ತಿ ಮಂತ್ರಿಗಳನ್ನು ಸಭಾಧ್ಯಕ್ಷರ ಮುಖಾಂತರ ಕೋರುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.— ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ವರ್ಷ ವರ್ಷ ಹೆಚ್ಚಾಗ್ತಾ ಇದೆ. ಆಂತರಿಕ ಉತ್ಪಾದನೆ ಇದಕ್ಕೆ ತಕ್ಕಂತೆ ಹೆಚ್ಚದೇ ಇರುವುದರಿಂದ ವಿದ್ಯುತ್ ಕೊರತೆ ಉಂಟಾಗಿದೆ. ಇಷ್ಟೇ ಅಲ್ಲದೆ ಸೂಪಾ ಮತ್ತು ಲಿಂಗನಮಕ್ಕಿ ಜಲಾಶಯಗಳಲ್ಲಿ ಮುಂಗಾರಿನ ವಿಫಲತೆ ಪರಿಣಾಮವಾಗಿ ನಿರಿನ ಪ್ರಮಾಣ ಹಿಂದಿನ ವರ್ಷಗಳಿಗಿಂತ ಈ ವರ್ಷ ತುಂಬಾ ಕಡಿಮೆಯಾಗಿದೆ. ರಾಜ್ಯದಲ್ಲಿ ಬಹುಪಾಲು ವಿದ್ಯುತ್ತನ್ನು ಜಲವಿದ್ಯುತ್‌ಗಾರಗಳಿಂದ ಪಡೆಯುವುದರಿಂದ ವಿದ್ಯುತ್ ಬೇಡಿಕೆಯನ್ನು ಪೂರೈಸಲಾಗುತ್ತಿಲ್ಲ. ಭಾಗಶಃ ಇದನ್ನು ಸ್ವಲ್ಪಮಟ್ಟಿಗೆ ಭರಿಸಲು ನೆರೆರಾಜ್ಯಗಳಿಂದ ಮತ್ತು

ಕೇಂದ್ರ ವಿದ್ಯುತ್ ಯೋಜನೆಗಳಿಂದ ಆದಷ್ಟು ಹೆಚ್ಚಿನ ನೆರವು ಪಡೆಯುತ್ತಿದ್ದೇನೆ. ಆದರೂ ಸಹ ವಿದ್ಯುತ್ ಕೊರತೆಯನ್ನು ಭರಿಸಲಾಗುತ್ತಿಲ್ಲ. ಆದ್ದರಿಂದ ವಿದ್ಯುತ್ ಕಡಿತವನ್ನು ಎಲ್ಲಾ ವಿದ್ಯುತ್ ಗ್ರಾಹಕರ ಮೇಲೆ (ಚಿತಾಗಾರ ಮತ್ತು ನೀರಾವರಿ ಪಂಪುಸೆಟ್ಟುಗಳನ್ನು ಬಿಟ್ಟು) ಶೇ. ೧೦ ರಿಂದ ೮೦ ರಷ್ಟು ಹೇರಲಾಗಿದೆ.

ನೀರಾವರಿ ಪಂಪ್‌ಸೆಟ್ಟುಗಳಿಗೆ ದಿನವಹಿ ಮಧ್ಯಾಹ್ನ ೨ ಗಂಟೆಯಿಂದ ಬೆಳಿಗ್ಗೆ ೬ ಗಂಟೆ ವರೆಗೆ ವಿದ್ಯುತ್ ಒದಗಿಸಲಾಗುತ್ತಿದೆ. ಆದಕಾರಣ ರೈತರು ಇದರ ಉಪಯೋಗ ಪಡೆಯಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ನಿಲುಗಡೆ ಬೆಳಿಗ್ಗೆ ೬ ಗಂಟೆಯಿಂದ ಮಧ್ಯಾಹ್ನ ೨ ಗಂಟೆಯ ವರೆಗೆ ಮಾತ್ರ ವಿಧಿಸಲಾಗಿದೆ.

ಈ ಮೇಲಿನ ಕಾರಣಗಳಿಂದ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿರುವ ಪ್ರದೇಶಗಳಲ್ಲಿನ ರೈತರಿಗೆ ಮಾತ್ರ ವಿಶೇಷವಾಗಿ ಈ ವಿದ್ಯುತ್ ನಿಲುಗಡೆಯನ್ನು ಈಗಿನ ಪರಿಸ್ಥಿತಿಯಲ್ಲಿ ತೆಗೆದು ಹಾಕಲು ಸಾಧ್ಯವಿಲ್ಲ.

೧೩) ಸಾಲಿಗ್ರಾಮ ಕೋಟ ಮಾರ್ಗದಲ್ಲಿ ರಾತ್ರಿ ಸುವಿಹಾರಿ ಬಸ್‌ಗಳ ಸಂಚಾರ ವ್ಯವಸ್ಥೆಯನ್ನು ಪ್ರಾರಂಭಿಸುವುದರ ಬಗ್ಗೆ

ಶ್ರೀ ಬಸವರಾಜ್ (ಬ್ರಹ್ಮಾವರ).— ಮಾನ್ಯ ಅಧ್ಯಕ್ಷರೇ, ನನ್ನ ಮತದಾರರ ಕ್ಷೇತ್ರವಾದ ಸಾಲಿಗ್ರಾಮ ಕೋಟ ಮತ್ತು ಅದರ ಆಸುಪಾಸು ಗ್ರಾಮಗಳಿಂದ ಬಹಳಷ್ಟು ಜನರು ಬೆಂಗಳೂರಿನಲ್ಲಿ ಹೋಟೇಲು ಉದ್ಯಮ ಮತ್ತಿತರ ಉದ್ಯೋಗಗಳನ್ನು ನಡೆಸಿಕೊಂಡು ಬಂದಿರುತ್ತಾರೆ. ಈಗ ಅವರಿಗೆ ತಮ್ಮ ಊರಿಗೆ ಹೋಗಿ ಬರಲು ಸಾಕಷ್ಟು ಸಂಖ್ಯೆಯಲ್ಲಿ ಬಸ್ಸು ಸಂಚಾರದ ವ್ಯವಸ್ಥೆ ಇರುವುದಿಲ್ಲ. ಈ ಕುರಿತು ಜನರ ಬೇಡಿಕೆಯನ್ನು ಹಲವು ಬಾರಿ ಸಚಿವರ ಗಮನಕ್ಕೆ ತಂದರೂ, ಈವರೆಗೆ ಬಸ್ಸು ಸಂಚಾರದ ವ್ಯವಸ್ಥೆ ಆಗಿರುವುದಿಲ್ಲ. ಆದುದರಿಂದ ಆರ್ಥಿಕವಾಗಿಯೂ ಲಾಭದಾಯಕವಾದ ಬೆಂಗಳೂರಿನಿಂದ ಸಾಲಿಗ್ರಾಮ-ಕೋಟದ ಮಾರ್ಗದಲ್ಲಿ ಪ್ರತಿ ರಾತ್ರಿ ಸುವಿಹಾರಿ ಬಸ್ಸಿನ ಸಂಚಾರದ ವ್ಯವಸ್ಥೆಯನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಒತ್ತಾಯಿಸುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಸಾಲಿಗ್ರಾಮವು ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನಲ್ಲಿರುತ್ತದೆ. ೧೯೮೧ರ ಜನಗಣತಿ ಪ್ರಕಾರ ಸಾಲಿಗ್ರಾಮದಲ್ಲಿ ೧೩,೨೮೮ ಜನಸಂಖ್ಯೆ ಇರುತ್ತದೆ. ಸಾಲಿಗ್ರಾಮವು ಕುಂದಾಪುರದಿಂದ ಸುಮಾರು ೧೬ ಹಾಗೂ ಉಡುಪಿಯಿಂದ ಸುಮಾರು ೩೩ ಕಿ.ಮೀ. ದೂರದಲ್ಲಿದ್ದು, ಪ್ರಯಾಣಿಕರ ಸಾರಿಗೆಯು ರಾಷ್ಟ್ರೀಕರಣವಾಗದೆ ಇರುವ ಪ್ರಯತ್ನದಲ್ಲಿರುತ್ತದೆ ಈಗ ಸುಮಾರು ೩೦ ಖಾಸಗೀ ವಾಹನಗಳು ಸಾಲಿಗ್ರಾಮದ ಮೂಲಕ ಉಡುಪಿ ಮತ್ತು ಕುಂದಾಪುರದ ಮಧ್ಯೆ ಸಂಚರಿಸುತ್ತಿರುತ್ತವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಕುಂದಾಪುರ ಮತ್ತು ಉಡುಪಿಯಿಂದ ಈಗ ಸುಖಾಸೀನ ವಾಹನಗಳನ್ನು ಬೆಂಗಳೂರಿಗೆ ಸಾಲಿಗ್ರಾಮದ ಮುಖಾಂತರ ಓಡಿಸುತ್ತಿದ್ದು ಸಾಲಿಗ್ರಾಮದಿಂದ ಬೆಂಗಳೂರಿಗೆ ಪ್ರಯಾಣಿಸಲಿಚ್ಛಿಸುವ ಪ್ರಯಾಣಿಕರು ಮೇಲೆ ತಿಳಿಸಿರುವ ಖಾಸಗೀ ವಾಹನಗಳಲ್ಲಿ ಉಡುಪಿ ಅಥವಾ ಕುಂದಾಪುರಕ್ಕೆ ಪ್ರಯಾಣ ಮಾಡಿ ಅಲ್ಲಿಂದ ಬೆಂಗಳೂರಿಗೆ ಈ ಸುಖಾಸೀನ ವಾಹನಗಳಲ್ಲಿ ಪ್ರಯಾಣಿಸಬಹುದು. ಈ ಸುಖಾಸೀನ ವಾಹನಗಳ ಜೊತೆಗೆ ಸಂಸ್ಥೆಯು ಕುಂದಾಪುರ ಮತ್ತು ಉಡುಪಿಯಿಂದ ಅರೆ ಸುಖಾಸೀನ ವಾಹನಗಳನ್ನು ಹಾಗೂ ವೇಗದ ವಾಹನಗಳನ್ನು ಬೆಂಗಳೂರಿಗೆ ಓಡಿಸುತ್ತಿದೆ. ಸಾಲಿಗ್ರಾಮವು ಉಪವಿಭಾಗೀಯ ಕೇಂದ್ರ ಅಥವಾ ತಾಲ್ಲೂಕು ಕೇಂದ್ರವಾಗದೆ ಇದ್ದು ಇಲ್ಲಿಂದ ಬೆಂಗಳೂರಿಗೆ ಸುಖಾಸೀನ ವಾಹನದಲ್ಲಿ ಪ್ರಯಾಣಿಸಲು ಇಚ್ಛಿಸುವ ನೇರ ಪ್ರಯಾಣಿಕರ ಒತ್ತಡವಿಲ್ಲದೇ ಇರುವುದರಿಂದ ಸಾಲಿಗ್ರಾಮದಿಂದ ಬೆಂಗಳೂರಿಗೆ ಸುಖಾಸೀನ ವಾಹನ ಓಡಿಸುವುದು ಸದ್ಯಕ್ಕೆ ಸೂಕ್ತವಾಗಿರುವುದಿಲ್ಲ. ಆದರೂ ಕೂಡ ಮಾನ್ಯ ಸದಸ್ಯರು ಕೇಳಿರುವಂತೆ, ಇದರ ಬಗ್ಗೆ ಟ್ರಾಫಿಕ್ ಸರ್ವೆ ಮಾಡಿಸಿ, ಸಾಕಷ್ಟು ಜನರು ಸಂಚಾರ ಮಾಡುವುದು ಕಂಡು ಬಂದಲ್ಲಿ ಸುಖಾಸೀನ ವಾಹನವನ್ನು ಇನ್ನು ಒಂದು ತಿಂಗಳ ಒಳಗೆ ಕಳಿಸಿಕೊಡುತ್ತೇನೆ.